# ಪ್ರಧಾನ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಜಮಖಂಡಿ

**ಸಿ.ಸಿ.ನಂ: 1560**/2022

1) ಕರ್ನಾಟಕ ರಾಜ್ಯ ...ಫಿರ್ಯಾದಿ.

ವಿರುದ್ಧ

1) ಯಲ್ಲಪ್ಪ ಲಾಯಪ್ಪ ಸೈನಸಕಾಳೆ ,

2) ಸೈಫಾನಮಲಿಕ ಕಾಶೀಂಸಾಬ ಜಲವಾಡ

ಇಬ್ಬರೂ ಸಾಃ ತಾಡವಲಗ, ತಾಃ ಇಂಡಿ ....ಆರೋಪಿ ನಂ. 1 ಮತ್ತು 2

**:: ದಂಡ ಪ್ರಕ್ರಿಯಾ ಸಂಹಿತೆ ಕಲಂ 251 ರ ಅಡಿ ಆಪಾದನೆ ::**

ದಿಃ 31-07-2022 ರಂದು 04-30 ಗಂಟೆಗೆ ಸಾವಳಗಿ ಪೊ ಠಾಣೆ ಹದ್ದಿಯ ತೊದಲಬಾಗಿ ಗ್ರಾಮದಿಂದ ಹೆಬ್ಬಾಳಟ್ಟಿ ಗ್ರಾಮಕ್ಕೆ ಹೋಗುವ ಕಚ್ಚಾ ರಸ್ತೆ ಮೇಲೆ ರಾವುತ ಸೊನ್ನದ ಇವರ ಜಮೀನದ ಹತ್ತಿರ 1 ನೇ ಆರೋಪಿಯಾದ ನೀನು ಅಧಿಕೃತ ಚಾಲನಾ ಪತ್ರವನ್ನು ಹೊಂದದೆ ಅಶೋಕ ಲೈಲಾಂಡ ಕಂಪನಿಯ ಟ್ಯಾಂಕರ್ ನಂ. ಜಿಎ-02/ವಿ-7410 ನೇದ್ದನ್ನು ಹೆಬ್ಬಾಳಟ್ಟಿ ಕಡೆಯಿಂದ ತೊದಲಬಾಗಿ ಕಡೆಗೆ ಅತೀ ಜೋರಾಗಿ , ನಿರ್ಲಕ್ಷತನದಿಂದ ನಡೆಸಿಕೊಂಡು ಬಂದು ನಿನ್ನ ಮುಂದೆ ಪಿರ್ಯಾದಿಯ ಮಗನಾದ ಆರೋಪಿ ನಂ. 3 ಈತನು ಬಜಾಜ ಮೋಟಾರ ಸೈಕಲ ನಂ. ಕೆಎ-28/ಇಯು-5182 ನೇದ್ದರ ತನ್ನ ತಾಯಿ ಹಾಗೂ ಅಕ್ಕನ ಮಗಳನ್ನು ಕೂಡ್ರಿಸಿಕೊಂಡು ತೊದಲಬಾಗಿ ಕಡೆಗೆ ಹೊರಟ ಮೋಟಾರು ಸೈಕಲಕ್ಕೆ ನೀನು ಸೈಡಿನಿಂದ ಟ್ಯಾಂಕರ್ ಹಾಯಿಸಿ ಅಪಘಾತಪಡಿಸಿದ್ದರಿಂದ ಮೋಟಾರ ಸೈಕಲ ಕೆಳಗೆ ಸಿಕ್ಕು 50 ಅಡಿ ಎಳೆದುಕೊಂಡು ಹೋಗಿ 3 ನೇ ಆರೋಪಿ ಮತ್ತು ತಂಗೆವ್ವ ಇವರಿಗೆ ಭಾರಿ ಗಾಯಪಡಿಸಿ ಹಾಗೂ ಅಕ್ಕನ ಮಗಳಿಗೆ ಸಾದಾ ಗಾಯಪಡಿಸಿ ಟ್ಯಾಂಕರ್ನು ಸ್ಥಳದಲ್ಲಿಯೇ ಬಿಟ್ಟು ಹೋಗಿದ್ದು , ಗಾಯಾಳು ತಂಗೆವವ ಇವಳಿಗೆ ಉಪಚಾರ ಕುರಿತು ಜಮಖಂಡಿ ಆಸ್ಪತ್ರೆಗೆ ತೆಗೆದುಕೊಂಡು ಹೋದಾಗ ಅದೇ ದಿನ ಮೃತಪಟ್ಟಿದ್ದು ಮತ್ತು 3 ನೇ ಆರೋಪಿ ಈತನಿಗೆ ಉಪಚಾರ ಕುರಿತು ವಿಜಯಪುರಕ್ಕೆ ತೆಗೆದುಕೊಂಡು ಹೋಗುವಾಗ ಮೃತಪಟ್ಟಿದ್ದು ಇರುತ್ತದೆ. ಅಲ್ಲದೇ 2 ನೇ ಆರೋಪಿಯಾದ ನೀನು ನಿನ್ನ ಮಾಲೀಕತ್ವದ ಅರೋಕ ಲೈಲಾಂಡ ವಾಹನಕ್ಕೆ ಇನ್ಸುರೆನ್ಸ ಮಾಡಿಸದೆ ಅದನ್ನು ಅಧೀಕೃತ ಚಾಲನಾ ಪತ್ರವಿಲ್ಲದ ಆರೋಪಿ 1 ನೇದವನಿಗೆ ಚಾಲನೆ ಮಾಡಲು ಕೊಟ್ಟಿದ್ದು ಆ ಮೂಲಕ ಭಾ ದಂ ಸಂ ಕಲಂ 279, 337, 338 ಮತ್ತು ಮೋಟಾರು ವಾಹನ ಅಧಿನಿಯಮದಡಿ ಕಲಂ 3/181, 187 ಮತ್ತು 146/196 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಪ್ರಶ್ನೆ 1) ಮೇಲೆ ಓದಿ ಹೇಳಿದ ಆಪಾದನೆಯು ತಿಳಿಯಿತೋ ಹೇಗೆ ?

ಉತ್ತರಃ

ಪ್ರಶ್ನೆ 2) ಸದರಿ ಆರೋಪಿಯ ಆಪಾದನೆಯನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆ ಆಗಬೇಕೋ ?

ಉತ್ತರಃ

(ಸದರಿ ಆರೋಪಿಯ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ನಂತರ ಅವನ ಸಹಿಯನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.)

ಓ. ಹೇ. ಕೇ. ಸರಿ. ಇದೆ.

C/C ಪ್ರಧಾನ ಜೆ ಎಂ ಎಫ್ ಸಿ ಜಮಖಂಡಿ